ಶ್ರೀ ಎಸ್. ನಿಜಲಿಂಗಪ್ಪ.—ಅದು ಈ ಪ್ರಶ್ನೆಯಲ್ಲಿ ಉದ್ಭವವಾಗುವುದಿಲ್ಲ. ಹಿಂದೆ ಕೊಟ್ಟಿರುವ ಆಶ್ವಾಸನೆಗಳೇ ಆಗಲೀ ಈಗ ಕೊಡುವ ಆಶ್ವಾಸನೆಗಳೇ ಆಗಲಿ ಯಾವುದೂ ಹೋಪಿಲ್ಲವೆ ಏನೂ ಮಾಡುವುದಕಾಗುವುದಿಲ್ಲ. ಹಣ ಸಾಕಷ್ಟು ಸರ್ಕಾರಕ್ಕೆ ದೊರೆತ ಕೂಡಲೇ ಈ ಯೋಜನೆಗೆ ತಕ್ಕ ಹಾಗೆ ನೀರಾವರಿ ಯೋಜನೆಯ ಕಾರ್ಯವನ್ನೂ ಹಾಗೂ ಪ್ರವಾಹ ನಿಯಂತ್ರಣ ಕಾರ್ಯವನ್ನೂ ಕೈಗೊಳ್ಳಲು ತಕ್ಕ ಪ್ರಯತ್ನಗಳನ್ನು ಮಾಡುತ್ತೇವೆ.

Khadi Centres in the State

* *Q.*—228. Sri CHANNABYRE GOWDA (Hoskote).—

Will the Government be pleased to state :—

(*a*) the names of Khadi Centres in the State that were being run by Government ;

(*b*) when these centres were entrusted to the State Khadi Board ;

(*c*) the amount spent by Government in these Centres ;

(*d*) the reasons for closing them now ?

A.—Sri K. MALLAPPA (Minister for Industries and Commerce).—

(*a*) 1 Badanval Khadi Centre.
2 Aimangala Khadi Centre.
3 Lokapavani Khadi Centre.
4 Hosur Khadi Centre.
5 Khadi and Gramodyog Bhandars at:—
(i) Subedar Chatram Road, Bangalore.
(ii) Bhandar at Hassan.
(iii) Bhandar at Mangalore.
(iv) Bhandar at K.G.F.

(*b*) From 1st Janaury 1958.

(*c*) About Rs. 10 lakhs.

(*d*) Heavy and continuous losses and stoppage of financial assistance by the Khadi and Village Industries Commission. Action is however being taken to organize Co-operative Societies or Associations to take up the work and continue these Centres.

9-30 A.M.

ಶ್ರೀ ಬಿ. ಚನ್ನಬೈರೇಗೌಡ.—ಖಾದಿ ಕೇಂದ್ರಗಳನ್ನು ಖಾದಿ ಬೋರ್ಡಿಗೆ 1-1-1958 ರಿಂದ ವಹಿಸಿ ಕೊಡುವುದಿತು ಎಂದು ಹೇಳಿದ್ದೀರಿ, ಅದುವರೆಗೆ ಅವುಗಳನ್ನು ಯಾರು ನಡೆಸುತ್ತಿದ್ದರು, ಅವುಗಳನ್ನು ಲಾಭದಾಯಕವಾಗಿ ನಡೆಸುತ್ತಿದ್ದರೋ ಅಥವಾ ಏ ಗಳಿಂದ ನಷ್ಟವೇನಾದರೂ ಆಗುತ್ತಿತ್ತೆ. ಯಾವ ರೀತಿ ನಡೆಸುತ್ತಿದ್ದರು ಎಂಬುದನ್ನು ಹೇಳುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—1-1-1958ರ ತನಕ ಸರ್ಕಾರದವರು ಅವುಗಳನ್ನು ನಡೆಸುತ್ತಿದ್ದರು, ಆ ನಂತರ ಅವುಗಳನ್ನು ಖಾದಿ ಬೋರ್ಡಿಗೆ ವಹಿಸಿಕೊಡಲಾಯಿತು.

ಶ್ರೀ ಬಿ. ಚನ್ನಬೈರೇಗೌಡ.—ಖಾದಿ ಬೋರ್ಡಿಗೆ ಅವುಗಳನ್ನು ವಹಿಸಿದ ಮೇರೆ ಆ ಖಾದಿ ಕೇಂದ್ರಗಳಿಗೆ ಹಾಕಿದ್ದಂತಹ 10 ಲಕ್ಷ ರೂಪಾಯಿಗಳ ಬಂಡವಾಳ ಏನಾಯಿತು? ಮತ್ತು ಅದರಲ್ಲಿ ಆದ ನಷ್ಟ ಎಷ್ಟು?

ಶ್ರೀ ಕೆ. ಮಲ್ಲಪ್ಪ.—ಅಸೆಟ್ಸ್ ಮತ್ತು ಲಯಬಿಲಿಟೀಸ್ ಎರಡನ್ನೂ ಖಾದಿ ಬೋರ್ಡಿಗೆ ವಹಿಸಿ ಕೊಟ್ಟಿದೆ. ಅದರಲ್ಲಿ ಆಗಿರತಕ್ಕ ನಷ್ಟ ಎಷ್ಟು ಎಂದರೆ 1-1-1958 ರಿಂದ 1964 ನೇ ಇಸವಿಯ ವರೆಗೆ ರೋಕಪಾವನಿ ಖಾದಿ ಕೇಂದ್ರದಲ್ಲಿ 62 ಸಾವಿರ ರೂಪಾಯಿಗಳು ನಷ್ಟವಾಗಿದೆ. ಅಂಬಾರ್ ಖಾದಿ ಕೇಂದ್ರದಲ್ಲಿ 90,142, ರೂಪಾಯಿ 90 ನಯಾಪೈಸಾ ನಷ್ಟವಾಗಿದೆ. ಕೋಲಾರ ಡಿಸ್ಟ್ರಿಕ್ಟ್ ಖಾದಿ ಕೇಂದ್ರದಲ್ಲಿ 1,51,048 ರೂಪಾಯಿಗಳು ನಷ್ಟವಾಗಿದೆ. ಬದನವಾಳ ಖಾದಿ ಕೇಂದ್ರದಲ್ಲಿ 3,06,640 ರೂಪಾಯಿಗಳು ನಷ್ಟವಾಗಿದೆ. ಐಮಂಗಲ ಖಾದಿ ಕೇಂದ್ರದಲ್ಲಿ 9,14,957 ರೂಪಾಯಿಗಳು ನಷ್ಟವಾಗಿದೆ.

ಶ್ರೀ ಬಿ. ಬೈರಪ್ಪಾಜಿ.—1-1-1958 ರಿಂದ 1964 ನೇ ಇಸವಿಯವರೆಗೆ ಆ ಖಾದಿ ಕೇಂದ್ರಗಳಲ್ಲಿ ಯಾವರೀತಿಯ ನಷ್ಟವೂ ಇಲ್ಲದೆ ಕೆಲಸಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಿದೆಯೇ?

ಶ್ರೀ ಕೆ. ಮಲ್ಲಪ್ಪ.—ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಿದರೆ ಅದಕ್ಕೆ ಉತ್ತರವನ್ನು ಹೇಳುತ್ತೇನೆ. ತಾವು ಈಗ ಕೇಳತಕ್ಕ ಪ್ರಶ್ನೆ ಇದರಲ್ಲಿ ಅಡಕವಾಗಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಬದನವಾಳ ಖಾದಿ ಕೇಂದ್ರದಲ್ಲಿ ನಷ್ಟವಾಗಿದೆ ಎಂದು ಹೇಳಿ ಅದನ್ನು ಮುಚ್ಚಲಾಗಿದೆ ಎಂದು ಹೇಳಿದ್ದೀರಿ, ಹಾಗಾದರೆ ಗುಂಡ್ಲುಪೇಟೆ ಖಾದಿ ಕೇಂದ್ರದಲ್ಲಿ ಎಷ್ಟು ನಷ್ಟವಾಗಿದೆ ಎಂಬುದನ್ನು ಹೇಳುತ್ತೀರಾ?

ಶ್ರೀ ಕೆ. ಮಲ್ಲಪ್ಪ.—ಯಾವ ಯಾವ ಊರಿನಲ್ಲಿ ಎಷ್ಟೆಷ್ಟು ನಷ್ಟವಾಗಿದೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಎಲ್ಲಾ ಒಟ್ಟಿಗೆ ಹೇಳಿದ್ದೇನೆ.

Sri S. RAJAGOPAL.—It is stated that this work has been entrusted to the Khadi Board. May I know the names of members of the Khadi Board.

Sri K. MALLAPPA.—The Khadi Board membership varied from time to time.

Sri S. RAJAGOPAL.—May I know the names of members of at least the Kolar Centre?

Sri K. MALLAPPA.—Quite recently a society has been formed and the Hon'ble Member knows the Members of that society. When the society was opened recently the Hon'ble Member was also present.

Sri S. M. KRISHNA.—In answer to (d) it is said that the reasons assigned for closing up some of these Khadi centres are, heavy and continuous losses and stoppage of financial assistance by the Khadi and Village Industries Commission. When these centres were being managed by the Government, it sustained heavy losses as a result of which they have given up the idea of continuing these centres. May I know what prompts the Government to feel that the same centres would be able to put in certain profitable existence under co-operative sector, in which case, it there is heavy loss in the co-operative field also, who is going to fill in the gap?

Sri K. MALLAPPA.—Centrally, these centres were being managed by the Khadi Board, and there was no supervision on the local centres. So, it is now decided that the management should be decentralised and local people should be entrusted with it so that they may supervise it actively.

Sri M. C. BASAPPA.—These centres were directly run by the Government for some time. May I know whether they were running on profit or loss?

Sri K. MALLAPPA.—The information is not available. If a separate question is asked, I will collect the information and furnish it.

ಶ್ರೀ ಬಿ. ಭಾನ್ಮರ ಶೆಟ್ಟಿ.—ಆ ಖಾದಿ ಕೇಂದ್ರಗಳಿಗೆ 10 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ ಎಂದು ಹೇಳಿದ್ದೀರಿ, ಆ ಹಣ ಸಿಬ್ಬಂದಿಗೋಸ್ಕರ ಖರ್ಚಾಗಿದೆಯೇ, ರಿಪೇರಿ ಕೆಲಸ ಮುದಕ್ಕಾಗಿ ಖರ್ಚಾಗಿದೆಯೇ ಅಥವಾ ಇನ್ನು ಯಾವುದಕ್ಕಾಗಿ ಆ ಹಣ ಖರ್ಚಾಗಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ಅದರ ಕಟ್ಟಡ ಮತ್ತು ಇತರ ಸಾಮಗ್ರಿಗಳಿಗೆಲ್ಲಾ 10 ಲಕ್ಷ ರೂಪಾಯಿಗಳು ಖರ್ಚಾಗಿದೆ. ಅದೆಲ್ಲವನ್ನೂ ಖಾದಿ ಬೋರ್ಡಿಗೆ ಪಹಿಸಿಕೊಟ್ಟಿದೆ.

Sri S. SIVAPPA.—Government handed over these Khadi industries to the Khadi Board because under the Government they sustained losses. Now under the Khadi Board also they are sustaining heavier losses and the accounts are not at all traceable. May I know what would be the future of these industries when both the Government and the Khadi Board are unable to run them profitably ?

Sri K. MALLAPPA.—It is a complicated question. I think, it is better if simple questions are asked. The Hon'ble Member presumes that the Government was incurring losses and therefore the Khadi centres were handed over to the Khadi Board. That is not correct. In 1 56 57 there was an Act—Khadi and Village Industries Act, and pursuant to that Act the Centres were handed over to the Khadi Board, which was constituted under the Act and since its constitution certain losses have been incurred and the accounts have been audited till the end of 1964-1965.

Sri G. A. THIMMAPPA GOWDA.—Whether it is not a fact that these Khadi centres were running on profit when they were run by the Government ?

Sri K. MALLAPPA.—I am unable to give any definite information, because the information is not available. Moreover the question does not arise from this question.

Sri K. S. SURYANARAYANA RAO.—In addition to transferring the assets, may I know whether any financial assistance is given to these societies and if so to what extent ?

Sri K. MALLAPPA.—Financial assistance is given to the Khadi Board, but not to the societies. We meet the establishment expenditure, but the financial assistance for work is given by the Khadi Commission.

Sri K. S. SURYANARAYANA RAO.—Sir, I am not satisfied with the answer given by the Hon'ble Minister.

Mr. SPEAKER.—The Chair is not concerned with the satisfaction or otherwise of individual Member. The Chair is there only to regulate the business of the House.

ಶ್ರೀ ಸಿದ್ಧಯ್ಯ ಕಾಶೀಮಠ್.—ಖಾದಿ ಕೇಂದ್ರಗಳಲ್ಲಿ ಕಳ್ಳತನ ಮತ್ತು ಹಣದ ದುರುಪಯೋಗ ಅಪಾರವಾಗಿ ಆಗುತ್ತಿರುವುದರಿಂದ ಅದನ್ನು ನಿರಿಪಡಿಸುವುದಕ್ಕೆ ಸರ್ಕಾರದವರು ಏನು ಕಾರ್ಯಕ್ರಮವನ್ನು ಕೈಗೆಂಡಿದ್ದಾರೆ ?

ಶ್ರೀ ಕೆ. ಮಲ್ಲಪ್ಪ.—ಎಲ್ಲೆಲ್ಲಿ ಏನು ದುರುಪಯೋಗವಾಗಿದೆ, ಎಲ್ಲೆಲ್ಲಿ ಹಣ ಕಡಿಮೆ ಆಗಿದೆಯೋ ಅಲ್ಲೆಲ್ಲಾ ಪೋಲೀಸು ಕೇಸು ಹೂಡಿದ್ದಾರೆ.

ಶ್ರೀ ಸಂಜೀವಣ್ಣಾಧ ಒಕಲ.—ಖಾದಿ ಬೋರ್ಡ್ ಮುಂತಾಗ ಮಹಡಿರುವ ಸಂಸ್ಥೆಗಳಲ್ಲಿ ಇಷ್ಟು ಅವ್ಯವಸ್ಥೆಗಳು ಆಗುತ್ತಿರುವುದರಿಂದ ಇಂತಹ ಸಂಸ್ಥೆಗಳನ್ನು ಮಾದುವುದಕ್ಕೆ ಬದಲಾಗಿ ಇದರ ಕೆಲಸವನ್ನೆಲ್ಲಾ ಖಾದಿ ಇಂಡಸ್ಟ್ರೀಸ್ ಕಮಿಷನ್ನಿಗೇ ಏತಕ್ಕೆ ಪಹಿಸಬಾರದು ?

ಶ್ರೀ ಕೆ. ಮಲ್ಲಪ್ಪ.—ಇದನ್ನು ತಾವು ಅಪೇಕ್ಷೆ ಮಾಡಿದರೆ ಮಾಡಬಹುದು. This Act was enacted and if the House so feels, it can decide.

ಶ್ರೀ ಕೆ. ಲಕ್ಕಪ್ಪ.—ಖಾದಿ ಬೋರ್ಡ್ ವ್ಯವಹಾರದಲ್ಲಿ ಹಣ ದುರುಪಯೋಗವಾಗಿ ಮಾಡಿದವರ ಬಗ್ಗೆ ಯಾರ ಯಾರ ಮೇಲೆ ಯಾವ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ ಅದರ ವಿವರಣೆಗಳನ್ನು ಈ ಸಭೆಗೆ ಕೊಡುತ್ತೀರಾ ?

ಶ್ರೀ ಕೆ. ಮಲ್ಲಪ್ಪ.—ಯಾರ ಯಾರ ಮೇಲೆ ತನಿಖೆ ಮಾಡಿ ಮುಗಿದಿದೆಯೋ ಅವರಮೇಲೆಲ್ಲ ತಕ್ಕ ಕ್ರಮಗಳನ್ನು ತೆಗೆದುಕೊಂಡಿದ್ದೇವೆ.

Reconstitution of the Examination Board.

*Q.—251. Sri P. F. D'MELLOW (Nominated).—

Will the Government be pleased to state :—

(*a*) whether they intend to reconstitute the Examination Board for conducting the Mysore S.S.L.C. and the Mysore Higher Secondary School Examinations ;

(*b*) whether there is any proposal to reconstitute the Examination Board for conducting the Bangalore Anglo-Indian Secondary School Certificate Examination ;

(*c*) if so, whether the managements of the schools affected have been provided any opportunity to represent their views in this behalf ?

*A.—Sri S. R. KANTHI (Minister for Education).—

(*a*) No. However the question of establishing a Statutory Board for conducting S.S.L.C. and other examination is under consideration.

(*b*) No.

(*c*) Does not arise.

Sri P. F. D'MELLOW.—Arising out of reply to (*b*) may I know that steps Government propose to take to ensure that students who are at the moment appearing to the examinations conducted by this Board are not inconvinced ?

† Sri S. R. KANTHI.—That question is being considered by Government. I cannot give a categorical reply now.

ಶ್ರೀ ಸಿ. ಆರ್. ರಂಗೇಗೌಡ.—ಇಲ್ಲಿ ಹೇಳಿರುವಂತೆ ಶಾಸನಬದ್ಧ ಮಂಡಲಿಯನ್ನು ರಚಿಸುವ ವಿಷಯವು ಪರ್ಯಾಲೋಚನೆಯಲ್ಲಿದೆ, ಆದರೆ ಈಗ Anglo-Indian Certificate ಪರೀಕ್ಷೆ ನಡೆಸುತ್ತಿರುವವರಿಗೂ ಇದನ್ನು ತಿಳಿಸಲಾಗಿದೆಯೇ ?

ಶ್ರೀ ಎಸ್. ಆರ್. ಕಂಠಿ.—(ಬ)ಗೆ ಉತ್ತರವಾಗಿ ಇಲ್ಲ ಎಂದು ತಿಳಿಸಲಾಗಿದೆ.

ಶ್ರೀ ಸಿ. ಆರ್. ರಂಗೇಗೌಡ.—ಈ ವಿಚಾರವನ್ನು ಆಯಾ ಸಂಸ್ಥೆಗಳಿಗೆ ತಿಳಿಸಲಾಗಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಸರಕಾರದವರು ಅವರೆಲ್ಲರಿಗೂ ತಿಳಿಸಿರುವಂತೆ ಕಾಣುತ್ತದೆ.

Sri S. RAJAGOPAL.—What further time is required by Government to consider this Sir ?

Sri S. R. KANTHI.—If the Hon'ble Member wants to know what arrangements Government is going to make in respect of the Anglo-Indian Schools, I just now said the decision would be taken soon.